REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 33 । 19 ನವೆಂಬರ್ 2025 । ಬುಧವಾರ । ಪುಟಗಳು : 8 । ಬೆಲೆ : 2/-

## ಎರಡು ಲಕ್ಷ ಜನಸಂಖ್ಯೆ ಇರುವ ನಗರಗಳಲ್ಲಿ ಪಟ್ಟಣ ಸಹಕಾರಿ ಬ್ಯಾಂಕುಗಳ ಸ್ಥಾಪನೆ:

## ನ್ಯಾಫಕಬ್‌ನ ಅಂತರರಾಷ್ಟ್ರೀಯ ಸಮ್ಮೇಳನ ಕೋ-ಆಪ್ ಕುಂಭ್ -2025 ಉದ್ಘಾಟಿಸಿ ಸಹಕಾರ ಸಚಿವ ಅಮಿತ್ ಶಾ ಘೋಷಣೆ



**ನವದೆಹಲಿ:** ಕೇಂದ್ರದಲ್ಲಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರದ ಅಡಿಯಲ್ಲಿ ಅರ್ಬನ್ ಕೋ ಆಪರೇಟಿವ್ ಬ್ಯಾಂಕುಗಳು ಮತ್ತು ಸಹಕಾರಿ ಸಾಲ ಸಂಘಗಳು ಹೊಸ ಉತ್ಸಾಹದಿಂದ ಕಾರ್ಯನಿರತವಾಗಿವೆ. ಮುಂದಿನ ಐದು ವರ್ಷಗಳಲ್ಲಿ, ಎರಡು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪ್ರತಿ ನಗರಗಳಲ್ಲೂ ಅರ್ಬನ್ ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸಲಾಗುವುದು ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಷಾ ಹೇಳಿದರು.

ನವದೆಹಲಿಯಲ್ಲಿ ಆರಂಭವಾದ ಅರ್ಬನ್ ಕೋ ಆಪರೇಟಿವ್ ಬ್ಯಾಂಕುಗಳ ಮತ್ತು ಕ್ರೆಡಿಟ್ ವಲಯದ ಸೊಸೈಟಿಗಳ ಅಂತರರಾಷ್ಟ್ರೀಯ ಸಮ್ಮೇಳನ "ಕೋ-ಆಪ್ ಕುಂಭ್ 2025" ಅನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ವಲಯವನ್ನು ಆಧುನೀಕರಿಸಲು, ಅದರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸಲು ಸಹಕಾರ ಸಚಿವಾಲಯವು ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಹೇಳಿದ ಸಚಿವರು, ಈ ಅಂತರರಾಷ್ಟ್ರೀಯ ಸಮ್ಮೇಳನದ 'ದೆಹಲಿ ಘೋಷಣೆ 2025' ಪಟ್ಟಣ ಸಹಕಾರಿ ಬ್ಯಾಂಕುಗಳ ವಿಸ್ತರಣೆಗೆ ಒಂದು ಮಾರ್ಗಸೂಚಿಯಾಗಿ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು. ಸಹಕಾರ ವಲಯವನ್ನು ಆಧುನೀಕರಿಸಲು, ಅದರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸಲು ಸಹಕಾರ ಸಚಿವಾಲಯವು ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಕಳೆದ ಎರಡು ವರ್ಷಗಳಲ್ಲಿ, ಎನ್‌ಪಿಎಯನ್ನು ಶೇಕಡಾ 2.8ರಿಂದ ಶೇಕಡಾ 0.6ಕ್ಕೆ ಇಳಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ಅಮಿತ್ ಷಾ ಬೊಟ್ಟು ಮಾಡಿದರು. ಸಹಕಾರಿ ವಲಯದಲ್ಲಿ ಅಮುಲ್ ಮತ್ತು ಇಫ್ಕೋ ಜಾಗತಿಕವಾಗಿ ಮೊದಲ ಮತ್ತು ಎರಡನೇ ಸ್ಥಾನಗಳನ್ನು ಗಳಿಸಿರುವುದು ಕೂಡ ಸಹಕಾರಿ ಸಂಸ್ಥೆಗಳ ಪ್ರಸ್ತುತತೆಗೆ ಪುರಾವೆಯಾಗಿದೆ ಎಂಬುದನ್ನೂ ಅವರು ಬೊಟ್ಟು ಮಾಡಿದರು.

ಅಂತರರಾಷ್ಟ್ರೀಯ ಸಹಕಾರಿ ವರ್ಷದ ಆಚರಣೆಯ ಗುರುತಾಗಿ ಅರ್ಬನ್ ಕೋ ಆಪರೇಟಿವ್ ಬ್ಯಾಂಕುಗಳು ಮತ್ತು ಕ್ರೆಡಿಟ್ ಸಹಕಾರಿ ಸಂಘಗಳ ಸಹಕಾರಿ ಕುಂಭವನ್ನು ಆಯೋಜಿಸಲಾಗುತ್ತಿದೆ. ಕಳೆದ 3–4 ವರ್ಷಗಳಿಂದ ದೇಶದ ಪಟ್ಟಣ ಸಹಕಾರಿ ಬ್ಯಾಂಕಿಂಗ್ ವಲಯ ಮತ್ತು ಸಹಕಾರಿ ಕ್ರೆಡಿಟ್ ಸೊಸೈಟಿ ವಲಯವು ಹೊಸ ಉತ್ಸಾಹದಿಂದ ಮುನ್ನಡೆಯುತ್ತಿದೆ. ಪ್ರಸ್ತುತ ಸಮ್ಮೇಳನದಲ್ಲಿ ಈ ವಲಯಕ್ಕೆ ಸಂಬಂಧಿಸಿದ ನೀತಿ, ತಂತ್ರಜ್ಞಾನ ಮತ್ತು ನಾವೀನ್ಯತೆ ಕುರಿತು ಚರ್ಚೆಗಳು ನಡೆಯಲಿವೆ. ಈ ಸಮ್ಮೇಳನದ 'ದೆಹಲಿ ಘೋಷಣೆ 2025' ನಗರ ಸಹಕಾರಿ ಬ್ಯಾಂಕುಗಳ ವಿಸ್ತರಣೆಗೆ ಒಂದು ಮಾರ್ಗಸೂಚಿಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಅಮಿತ್ ಷಾ ಹೇಳಿದರು.

4ನೇ ಪುಟಕ್ಕೆ...

3 ಸಹಕಾರಿ ಚಳವಳಿ ಲಕ್ಷಾಂತರ ಕುಟುಂಬಗಳ ಆರ್ಥಿಕ ಮೂಲವಾಗಿದೆ ಸಹಕಾರ ಕ್ಷೇತ್ರ ಬೆಳೆದಷ್ಟು ಅವರ ಆರ್ಥಿಕ, ಸಾಮಾಜಿಕ ಚೈತನ್ಯ ಹೆಚ್ಚಾಗುತ್ತದೆ: ಮುಖ್ಯಮಂತ್ರಿ ಸಿದ್ದರಾಮಯ್ಯ

4-5 ಕೋ-ಆಪ್ ಕುಂಭ್ -2025 ನ್ಯೂಸ್

6-7 ಸಹಕಾರ ಸಪ್ತಾಹ ಆಹ್ವಾನ ಪತ್ರಿಕೆ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



### ಸಹಕಾರ ಎಲ್ಲ ವರ್ಗದ ಜನರ ಆರ್ಥಿಕ ಜೀವನಾಡಿಯಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದೆ

ಸಹಕಾರಿಗಳಾದ ನಾವುಗಳು ಬಲು ಕಾತುರದಿಂದ ಕಾಯುವ ಸಹಕಾರ ಸಪ್ತಾಹ ಯಶಸ್ವಿಯಾಗಿ ಶುರುವಾಗಿದೆ. ಈ ಸಂಭ್ರಮದಲ್ಲಿ ನಮ್ಮ ಮಹಾಮಂಡಳದ ನೇತೃತ್ವದಲ್ಲಿ ಇದೇ ನವೆಂಬರ್ 18ರಂದು ಹಾವೇರಿಯಲ್ಲಿ ಈ ಬಾರಿಯ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ನಡೆಯುತ್ತಿದೆ. ಸಪ್ತಾಹದ ಧ್ಯೇಯ: "ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು" ಎಂಬುದಾಗಿದ್ದರೆ, ಸಹಕಾರ ಉದ್ಯಮಶೀಲತೆಯ ಮೂಲಕ ಕರಕುಶಲ ವಸ್ತುಗಳು, ಕೈಮಗ್ಗಗಳು, ಕಾರ್ಮಿಕರು ಮತ್ತು ಮೀನುಗಾರಿಕೆ ಸೇರಿದಂತೆ ಯುವಜನರು, ಮಹಿಳೆಯರು ಮತ್ತು ದುರ್ಬಲ ವರ್ಗಗಳನ್ನು ಸಬಲೀಕರಣಗೊಳಿಸುವ ವಿಷಯವಾಗಿದೆ.

ಹಾವೇರಿ ನಾನು ಭೇಟಿ ಕೊಡಲು ತುಂಬಾ ಇಷ್ಟ ಪಡುವ ಜಿಲ್ಲೆಯಾಗಿದೆ. ಹಾವೇರಿ ರಾಜ್ಯದ ಮಧ್ಯಭಾಗದಲ್ಲಿದ್ದು, ಉತ್ತರದ ಬೀದರ್ ಮತ್ತು ದಕ್ಷಿಣದ ಕೊಳ್ಳೆಗಾಲಗಳ ನಡುವೆ ಸಮಾನ ಅಂತರದಲ್ಲಿದೆ. ಉತ್ತರ ಕರ್ನಾಟಕಕ್ಕೆ ಹಾವೇರಿಯೇ ಹೆಬ್ಬಾಗಿಲಾಗಿದೆ. ಹಾವೇರಿ ಸಾಂಸ್ಕೃತಿಕವಾಗಿ ಶ್ರೀಮಂತ ಜಿಲ್ಲೆಯಾಗಿದ್ದು, ಸಂತ ಶಿಶುನಾಳ ಶರೀಫರು, ಕನಕದಾಸರು, ಸರ್ವಜ್ಞ, ಹಾನಗಲ್ ಕುಮಾರ ಶಿವಯೋಗಿಗಳು, ಸಾಹಿತಿ ಗಳಗನಾಥರು, ಗಾನಯೋಗಿ ಪಂಚಾಕ್ಷರಿ ಗವಾಯಿಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ವಿನಾಯಕ ಕೃಷ್ಣ ಗೋಕಾಕರು ಮುಂತಾದ ಮಹನೀಯರುಗಳಿಗೆ ಜನ್ಮನೀಡಿದ ಹೆಮ್ಮೆಯ ಬೀಡಾಗಿದೆ. ಇಲ್ಲಿಯೇ ಚಾಲುಕ್ಯ, ರಾಷ್ಟ್ರಕೂಟರ ಕಾಲದ ಶಿಲಾಶಾಸನಗಳು ಪತ್ತೆಯಾಗಿವೆ. ಮಹೋನ್ನತ ಪರಂಪರೆಯ ಹಾವೇರಿಯಲ್ಲಿ ನಮ್ಮ ಮಹಾಮಂಡಳದ ನೇತೃತ್ವದಲ್ಲಿ ನಡೆಯಲಿರುವುದು ಸಂತಸದ ವಿಷಯವಾಗಿದೆ.

ಇಂದು ಇಡೀ ದೇಶದಲ್ಲಿ ನಮ್ಮ ಸಹಕಾರ ವಲಯವು ಅತ್ಯಂತ ಕ್ರಿಯಾಶೀಲವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದರೆ, ಅದಕ್ಕೆ ಕಾರಣ; ದೇಶದ ಪ್ರಥಮ ಪ್ರಧಾನ ಮಂತ್ರಿ ಪಂಡಿತ್ ಜವಹರಲಾಲ್ ನೆಹರೂ ರವರು ಸಹಕಾರ ಕ್ಷೇತ್ರಕ್ಕೆ ಪಂಚವಾರ್ಷಿಕ ಯೋಜನೆಗಳಲ್ಲಿ ಒತ್ತು ನೀಡಿದ್ದರ ಪರಿಣಾಮವಾಗಿ ಭಾರತದ ಸಹಕಾರ ಚಳವಳಿ ಇಂದು ವಿಶ್ವದಲ್ಲೇ ಬೃಹತ್ತಾಗಿ ಬೆಳೆದು ಗಾತ್ರ ಮತ್ತು ಸಂಖ್ಯೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.

ಸಹಕಾರ ಕ್ಷೇತ್ರಕ್ಕೆ ನೆಹರೂ ಅವರು ನೀಡಿದ ಅಪಾರ ಕೊಡುಗೆಯ ಹಿನ್ನೆಲೆಯಲ್ಲಿ ಅವರ ಜನ್ಮದಿನವಾದ ನವೆಂಬರ್ 14 ರಿಂದ 20 ರವರಿಗೆ ಅವರ ನೆನಪಿನಲ್ಲಿ ಸಹಕಾರ ಸಪ್ತಾಹ ಆಚರಣೆ ಮಾಡಿಕೊಂಡು ಬರಲಾಗುತ್ತಿದೆ. ನಮ್ಮ ದೇಶದಲ್ಲಿ ಸಹಕಾರ ವಲಯದ ಮೇಲೆ ಗ್ರಾಮೀಣ, ಆರ್ಥಿಕ ದುರ್ಬಲ ಹಾಗೂ ನಿರ್ಲಕ್ಷಿತ ಸಮುದಾಯದವರು ಹೆಚ್ಚಿನ ವಿಶ್ವಾಸ ಇಟ್ಟುಕೊಂಡಿದ್ದಾರೆ. ಸಹಕಾರ ಕ್ಷೇತ್ರ ಎಲ್ಲ ವರ್ಗದ ಜನರ ಆರ್ಥಿಕ ಜೀವನಾಡಿಯಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದೆ. ಅದರಿಂದಾಗಿಯೇ ಸಹಕಾರ ವಲಯ ಇಂದು ಬಲಿಷ್ಟವಾಗಿ ಬೆಳೆದಿದೆ.

"ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು" ಎನ್ನುವುದು ಮಹಾತ್ಮ ಗಾಂಧೀ ಅವರ ಆಶಯವಾಗಿದ್ದರೆ, "ಗ್ರಾಮಕ್ಕೊಂದು ಶಾಲೆ, ಪಂಚಾಯಿತಿ ಹಾಗೂ ಸಹಕಾರ ಸಂಘವಿದ್ದಲ್ಲಿ ಗ್ರಾಮಾಭಿವೃದ್ಧಿ ಸಾಧ್ಯ" ಎನ್ನುವುದು ಪಂಡಿತ್ ನೆಹರೂ ರವರ ಕನಸಾಗಿತ್ತು, ಆಶಯವಾಗಿತ್ತು. ಇದನ್ನು ಸಾಕಾರಗೊಳಿಸುವ ಜವಾಬ್ದಾರಿ ನಮ್ಮೆಲ್ಲರದಾಗಿದೆ.

ಈ ವಿಷಯದ ಬಗ್ಗೆ ನಾವೆಲ್ಲ ಚಿಂತನ-ಮಂಥನ ನಡೆಸೋಣ ಬನ್ನಿ. ನಿಮ್ಮ ಸಂಭ್ರಮ, ಸಡಗರ ಕಾಣುವ ಕಾತುರ ನನಗಿದೆ.

▸▸ ಎಚ್.ಕೆ. ಪಾಟೀಲ

## ರೂ. 2,000 ಮುಖ ಬೆಲೆಯ ರೂ. 5,817 ಕೋಟಿ ಮೌಲ್ಯದ ನೋಟುಗಳು ಇನ್ನೂ ಚಲಾವಣೆಯಲ್ಲಿ : ಆರ್‌ಬಿಐ



**ಮುಂಬೈ** : ರೂ. 2,000 ಮುಖಬೆಲೆಯ ರೂ. 5,817 ಕೋಟಿ ಮೌಲ್ಯದ ನೋಟುಗಳು ಇನ್ನೂ ಚಲಾವಣೆಯಲ್ಲಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಿಡುಗಡೆ ಮಾಡಿದ ಪ್ರಕಟಣೆಯಿಂದ ತಿಳಿದುಬಂದಿದೆ.

ರೂ. 2,000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುತ್ತಿರುವುದಾಗಿ 2023ರ ಮೇ 19ರಂದು ಆರ್‌ಬಿಐ ಘೋಷಿಸಿತ್ತು.

2023ರ ಮೇ 19ರಂದು ವ್ಯವಹಾರ ಮುಕ್ತಾಯದ ಸಮಯದಲ್ಲಿ ರೂ. 3.56 ಲಕ್ಷ ಕೋಟಿ ಮೌಲ್ಯದ ರೂ. 2,000 ಮುಖಬೆಲೆಯ ನೋಟುಗಳು ಚಲಾವಣೆಯಲ್ಲಿದ್ದವು.

2025ರ ಅಕ್ಟೋಬರ್ 31ರ ವ್ಯವಹಾರ ಮುಕ್ತಾಯದ ಸಮಯದಲ್ಲಿ ರೂ. 5,817 ಕೋಟಿ ಮೌಲ್ಯದ ನೋಟುಗಳು ಚಲಾವಣೆಯಲ್ಲಿವೆ ಎಂದು ಆರ್‌ಬಿಐ ಪ್ರಕಟಣೆ ತಿಳಿಸಿದೆ.

ರೂ. 2,000 ಮುಖಬೆಲೆಯ ನೋಟುಗಳ ಪೈಕಿ ಶೇ. 98.37 ರಷ್ಟು ಹಿಂಪಡೆಯಲಾಗಿದೆ ಎಂದು ಅದು ಹೇಳಿದೆ.

2023ರ ಮೇ 19 ರಿಂದ ಆರ್‌ಬಿಐನ 19 ವಿತರಣಾ ಕಚೇರಿಗಳಲ್ಲಿ ರೂ. 2,000 ನೋಟುಗಳ ವಿನಿಮಯ ಸೌಲಭ್ಯ ಲಭ್ಯವಿದೆ.

# ಸಹಕಾರಿ ಚಳವಳಿ ಲಕ್ಷಾಂತರ ಕುಟುಂಬಗಳ ಆರ್ಥಿಕ ಮೂಲವಾಗಿದೆ ಸಹಕಾರ ಕ್ಷೇತ್ರ ಬೆಳೆದಷ್ಟು ಅವರ ಆರ್ಥಿಕ, ಸಾಮಾಜಿಕ ಚೈತನ್ಯ ಹೆಚ್ಚಾಗುತ್ತದೆ: ಮುಖ್ಯಮಂತ್ರಿ ಸಿದ್ದರಾಮಯ್ಯ




**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಉದ್ಘಾಟಿಸಿ, ಸಹಕಾರ ರಂಗದ ಸಾಧಕರಿಗೆ 'ಸಹಕಾರ ರತ್ನ' ಪ್ರಶಸ್ತಿಯನ್ನು ವಿತರಿಸಿದರು. ನಂತರ ಮಾತನಾಡಿದ ಮುಖ್ಯಮಂತ್ರಿಗಳು, ದೇಶದ ಮೊದಲ ಪ್ರಧಾನಮಂತ್ರಿ ಜವಾಹರ್ ಲಾಲ್ ನೆಹರೂ ಅವರ ನೆನಪಿನಲ್ಲಿ ಮಕ್ಕಳ ದಿನಾಚರಣೆಯನ್ನು ಹಾಗೂ ಸಹಕಾರ ಸಪ್ತಾಹವನ್ನು ಅವರ ಜನ್ಮದಿನದಂದೇ ಆಚರಿಸಲಾಗುತ್ತದೆ. ಮಕ್ಕಳನ್ನು ಕಂಡರೆ ಹೇಗೆ ಪ್ರೀತಿಯಿತ್ತೋ ಹಾಗೆ ಸಹಕಾರ ಕ್ಷೇತ್ರದ ಬೆಳವಣಿಗೆ ಬಗ್ಗೆಯೂ ಅವರಿಗೆ ಒಲವಿತ್ತು.

ಈ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದಾಗ ದೇಶದ ಬಜೆಟ್ ಗಾತ್ರ 197 ಕೋಟಿ ರೂ. ಗಳು ಮಾತ್ರ ಇತ್ತು. ಎರಡು ಮೂರು ವರ್ಷಗಳ ನಂತರ 4 ಅಂಕಿಗಳ ಹಂತಕ್ಕೆ ತಲುಪಿತು. ಕೃಷಿ, ನೀರಾವರಿ, ಕೈಗಾರಿಕೆ ಹಾಗೂ ಗ್ರಾಮೀಣ ಹಿತಚಿಂತನೆಗಾಗಿಯೇ ಸಹಕಾರ ಚಳವಳಿಗೆ, ಬೆಳವಣಿಗೆಗೆ ಪ್ರೋತ್ಸಾಹ ನೀಡಿದರು. ಇದರೊಂದಿಗೆ ನೆಹರೂ ಅವರು ದೇಶವನ್ನು ವೈಜ್ಞಾನಿಕವಾಗಿ, ವೈಚಾರಿಕವಾಗಿ ಬೆಳೆಸುವ ಪ್ರಯತ್ನ ಮಾಡಿದರು. ಪಂಚ ವಾರ್ಷಿಕ ಯೋಜನೆಗಳ ಮೂಲಕ ದೇಶ ಕಟ್ಟುವ ಕೆಲಸವನ್ನು ಮಾಡಿದರು. ದೇಶದಲ್ಲಿ ಅನೇಕ ಕೈಗಾರಿಕೆಗಳಾಗಿದ್ದರೆ, ಅಣೆಕಟ್ಟುಗಳಾಗಿದ್ದರೆ, ಕೃಷಿಯಲ್ಲಿ ಸ್ವಾವಲಂಬಿಗಳಾಗಿದ್ದರೆ ಅದಕ್ಕೆ ನೆಹರೂ ಅವರು ಕಾರಣ. ಸುದೀರ್ಘ ಹದಿನೇಳು ವರ್ಷಗಳ ಕಾಲ ಈ ದೇಶದ ಪ್ರಧಾನಿಗಳಾಗಿ ಸೇವೆ ಸಲ್ಲಿಸಿದ್ದಾರೆ.

ಗ್ರಾಮೀಣ ಭಾರತದ ಪ್ರಗತಿಗಾಗಿ ನೆಹರೂ ಅವರು ಸಹಕಾರ ಕ್ಷೇತ್ರಕ್ಕೆ ಚೈತನ್ಯ ನೀಡಿದರು. ಇದರಿಂದಾಗಿ ಇಂದು ಸಹಕಾರಿ ಚಳವಳಿ ಲಕ್ಷಾಂತರ ಕುಟುಂಬಗಳ ಆರ್ಥಿಕ ಮೂಲವಾಗಿದೆ. ಸಹಕಾರ ಕ್ಷೇತ್ರ ಗಟ್ಟಿಯಾದರೆ ಆರ್ಥಿಕ, ಸಾಮಾಜಿಕ ಚೈತನ್ಯ ಹೆಚ್ಚಾಗುತ್ತದೆ. ಏಷ್ಯಾದಲ್ಲೇ ಮೊದಲ ಬಾರಿಗೆ ಸಹಕಾರಿ ಬ್ಯಾಂಕ್ ಸ್ಥಾಪನೆಯಾಗಿದ್ದು ರಾಜ್ಯದಲ್ಲಿ. ಹೀಗಾಗಿ ಕರ್ನಾಟಕವನ್ನು ಭಾರತದ ಸಹಕಾರ ಕ್ಷೇತ್ರದ ರಾಜಧಾನಿ ಎಂದು ಕರೆಯುತ್ತಾರೆ. ಯಾವುದೇ ಗ್ರಾಮ ಉದ್ಧಾರ ಆಗಬೇಕಾದರೆ ಆ ಗ್ರಾಮದಲ್ಲಿ ಒಂದು ಶಾಲೆ, ಒಂದು ಸಹಕಾರಿ ಸಂಘ, ಒಂದು ಆಸ್ಪತ್ರೆ ಇರಬೇಕು ಎನ್ನುವುದು ನೆಹರೂ ಅವರ ಸ್ಪಷ್ಟ ಕಲ್ಪನೆಯಾಗಿತ್ತು. ಈ ಕಲ್ಪನೆಯನ್ನು ಗುರಿಯಾಗಿಸಿಕೊಂಡು ಕೆಲಸ ಮಾಡಿ ಸಹಕಾರ ಚಳವಳಿಗೆ ನೆಹರೂ ಮತ್ತು ಮಹಾತ್ಮ ಗಾಂಧಿ ಅವರು ಶಕ್ತಿ ನೀಡಿದರು.

ರಾಜ್ಯದಲ್ಲಿ ವಾರ್ಷಿಕ ವಹಿವಾಟು ರೂ.25,000 ಕೋಟಿ ಜೊತೆಗೆ ಪ್ರತೀ ದಿನ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆ ಆಗುತ್ತಿದ್ದು, ಇದು ಸಹಕಾರಿ ಚಳವಳಿ ಮೂಲಕ ಬೆಳೆದ ಹಾಲು ಮಹಾಮಂಡಳಗಳ ಮಹತ್ ಸಾಧನೆ. ಹಾಲು ಉತ್ಪಾದಕರ ಸಂಘಗಳು ಚಳವಳಿ ಸ್ವರೂಪದಲ್ಲಿ ನಡೆದು ಮಧ್ಯವರ್ತಿಗಳ ಹಾವಳಿ ಇಲ್ಲದೆ ರೈತರು ಹಾಲನ್ನು ನೇರವಾಗಿ ಉತ್ಪಾದಕರ ಸಂಘಗಳಿಗೆ ಸರಬರಾಜು ಮಾಡುವಂತಾಯಿತು.

ಸಹಕಾರ ಕ್ಷೇತ್ರದಿಂದಾಗಿ ಕೃಷಿ ಸೇರಿದಂತೆ ಹಲವು ಕ್ಷೇತ್ರಗಳಿಗೆ ದೊಡ್ಡ ಚೈತನ್ಯ ಸಿಕ್ಕಿದೆ. ಲಕ್ಷಾಂತರ ಕುಟುಂಬಗಳ ಬದುಕಿಗೆ ಆಧಾರವಾಗಿದೆ. ನಮ್ಮ ಸರ್ಕಾರ ಹಾಲಿನ ಪ್ರೋತ್ಸಾಹ ಧನವನ್ನು ಲೀಟರಿಗೆ 3 ರೂ. ಮಾಡಿದೆ. ಈಗ ಪ್ರೋತ್ಸಾಹ ಧನವನ್ನು ಲೀಟರಿಗೆ ರೂ.5 ಗೆ ಹೆಚ್ಚಿಸಿ ಪ್ರತೀ ದಿನ ಸರ್ಕಾರದಿಂದ 5 ಕೋಟಿ ರೂಪಾಯಿ ಸಹಾಯಧನವನ್ನು ಹಾಲು ಉತ್ಪಾದಕರಿಗೆ ನೀಡಲಾಗುತ್ತಿದೆ. 40 ಲಕ್ಷ ರೈತರಿಗೆ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಸಹಾಯ ಧನ ಜಮೆ ಆಗುತ್ತಿದೆ ಇದಕ್ಕೆ ಸಹಕಾರ ಕ್ಷೇತ್ರವೇ ಕಾರಣ ಎಂದು ಶ್ಲಾಘಿಸಿದರು.

....1ನೇ ಪುಟದಿಂದ

ಕೋ–ಆಪ್ ಕುಂಭ 2025ರ ಮೂಲಕ, ಪಟ್ಟಣ ಸಹಕಾರಿ ಬ್ಯಾಂಕುಗಳನ್ನು ವಿಸ್ತರಿಸುವ ನಮ್ಮ ಕನಸು ಶೀಘ್ರದಲ್ಲೇ ಈಡೇರಲಿದೆ ಎಂದು ಹೇಳಿದ ಅಮಿತ್ ಷಾ, ಇಂದು, ಸಹಕಾರಿ ಡಿಜಿ–ಪೇ ಮತ್ತು ಸಹಕಾರಿ ಡಿಜಿ–ಸಾಲವನ್ನು ಅಂಬ್ರೆಲ್ಲಾ ಸಂಸ್ಥೆಯು ಪ್ರಾರಂಭಿಸಿದೆ ಎಂದರು.

ಸಹಕಾರ ಕ್ಷೇತ್ರದ ಅಭಿವೃದ್ಧಿ ನಿಟ್ಟಿನಲ್ಲಿ ಸಹಕಾರ ಸಚಿವಾಲಯವು ನಾಲ್ಕು ಗುರಿಗಳನ್ನು ನಿಗದಿಪಡಿಸಿದೆ ಎಂದು ತಿಳಿಸಿದ ಅಮಿತ್ ಷಾ, ಅವುಗಳನ್ನು ಈ ಸಮ್ಮೇಳನದಲ್ಲಿ ಬಿಚ್ಚಿಟ್ಟರು. ಇಂದಿನ ಯುವಜನರ ಮೂಲಕ ಸಹಕಾರದ ಅಭಿವೃದ್ಧಿ, ಅಂದರೆ ಯುವ ಪೀಳಿಗೆಯನ್ನು ಸಹಕಾರ ಚಳವಳಿಯೊಂದಿಗೆ ಸಂಪರ್ಕಿಸುವುದು. ಇದಕ್ಕಾಗಿ ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ, ಇದು ಸಹಕಾರಿ ವಲಯದಲ್ಲಿನ ಪ್ರತಿಯೊಂದು ಅಗತ್ಯವನ್ನು ಪೂರೈಸುತ್ತದೆ ಎಂದರು.

ಎರಡನೇಯದಾಗಿ ಎಲ್ಲಾ ರೀತಿಯ ಸವಾಲುಗಳನ್ನು ಎದುರಿಸಲು ಸಮರ್ಥವಾಗಿರುವ ಸಹಕಾರಿ ಸಂಘಗಳನ್ನು ಸಿದ್ಧಪಡಿಸುವುದು. ಮೂರನೇಯದು, ಮುಂದಿನ ಐದು ವರ್ಷಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪ್ರತಿ ನಗರದಲ್ಲೂ ಒಂದು ಪಟ್ಟಣ ಸಹಕಾರಿ ಬ್ಯಾಂಕ್ ಅನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. ಯುವ ಉದ್ಯಮಿಗಳು, ಸ್ವಸಹಾಯ ಗುಂಪುಗಳು ಮತ್ತು ಸಮಾಜದ ದುರ್ಬಲ ವರ್ಗಗಳ ಸಬಲೀಕರಣಕ್ಕಾಗಿ ಪಟ್ಟಣ ಸಹಕಾರಿ ಬ್ಯಾಂಕುಗಳು ಬಹು–ವಲಯ



ವಿಧಾನದೊಂದಿಗೆ ತಮ್ಮ ಪ್ರಮುಖ ಕಾರ್ಯಗಳನ್ನು ನಿರ್ವಹಿಸಬೇಕು ಎಂದು ಹೇಳಿದರು. ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವುದು ನಮ್ಮ ಗುರಿಯಾಗಿದ್ದು, ಅದೇ ಸಮಯದಲ್ಲಿ, ದುರ್ಬಲ ವರ್ಗಗಳನ್ನು ಬಲಪಡಿಸುವುದು ಮತ್ತು ನಗರ ಸಹಕಾರಿ ಬ್ಯಾಂಕುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಸಂಸ್ಥೆಯು ಇದನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದರು. ಪಟ್ಟಣ ಸಹಕಾರಿ ಬ್ಯಾಂಕುಗಳ ಮೂಲಕ ದುರ್ಬಲ ವ್ಯಕ್ತಿಗಳನ್ನು ಸಬಲೀಕರಣಗೊಳಿಸುವುದು ನಮ್ಮ ಗುರಿಗಳಲ್ಲಿ ಒಂದಾಗಿರಬೇಕು ಎಂದು ಅಮಿತ್ ಷಾ ಹೇಳಿದರು.

## ನ್ಯಾಫಕಬ್‌ನ ಅಂತರರಾಷ್ಟ್ರೀಯ ಸಮ್ಮೇಳನ ಕೋ–ಆಪ್ ಕುಂಭ್ –2025
## ಮುಂದಿನ ದಶಕದಲ್ಲಿ ಸಹಕಾರಿ ಸಂಸ್ಥೆಗಳು ತಾಂತ್ರಿಕ ನಾವೀನ್ಯತೆಯೊಂದಿಗೆ ಆರ್ಥಿಕ ಸೇರ್ಪಡೆಯನ್ನೂ ಸಂಯೋಜಿಸುವ ಅಗತ್ಯವಿದೆ– ಎಚ್.ಕೆ. ಪಾಟೀಲ ಕರೆ



**ನವದೆಹಲಿ :** ಅರ್ಬನ್ ಕೋ ಆಪರೇಟಿವ್ ಬ್ಯಾಂಕುಗಳ ಮತ್ತು ಕ್ರೆಡಿಟ್ ವಲಯದ ಸೊಸೈಟಿಗಳ ಅಂತರರಾಷ್ಟ್ರೀಯ ಸಮ್ಮೇಳನ "ಕೋ–ಆಪ್ ಕುಂಭ್ 2025" ಉದ್ಘಾಟನಾ ಕಾರ್ಯಕ್ರಮದಲ್ಲಿ ಕರ್ನಾಟಕದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ರಾಷ್ಟ್ರೀಯ ಪಟ್ಟಣ ಸಹಕಾರಿ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳ (NAFCUB)ದ ಪ್ರೆಸಿಡೆಂಟ್ ಎಮಿರೆಟಸ್‌ರವರಾದ ಎಚ್.ಕೆ. ಪಾಟೀಲ ಅವರು, ಭಾರತದ ಪಟ್ಟಣ ಸಹಕಾರಿ ಬ್ಯಾಂಕಿಂಗ್ ವಲಯವನ್ನು ಬಲಪಡಿಸಲು ಹೊಸದಾದ ನೀತಿಯ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ.

ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಷಾ ಅವರ ಸಮ್ಮುಖದಲ್ಲಿ ತಮ್ಮ ಅಭಿಪ್ರಾಯ ಮಂಡಿಸಿದ ಎಚ್.ಕೆ ಪಾಟೀಲ ಅವರು, ಸಹಕಾರಿ ಕ್ಷೇತ್ರದಲ್ಲಿ ದೀರ್ಘಕಾಲದಿಂದ ಬಾಕಿ ಇರುವ ಸವಾಲುಗಳನ್ನು ಪರಿಹರಿಸುವಲ್ಲಿ NAFCUB ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನೊಂದಿಗೆ ಸಹಕಾರ ಸಚಿವಾಲಯವು ಕೂಡ ತೊಡಗಿಸಿಕೊಂಡಿರುವುದನ್ನು ಶ್ಲಾಘಿಸಿ, ಸವಾಲುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಇದು ಕೇವಲ ಆರಂಭ ಎಂದು ಅಭಿಪ್ರಾಯಪಟ್ಟರು.

"ಕನಸುಗಳನ್ನು ಡಿಜಿಟಲೀಕರಣಗೊಳಿಸುವುದು, ಸಮುದಾಯಗಳನ್ನು ಸಬಲೀಕರಣಗೊಳಿಸುವುದು" ಎಂಬುದು ಈ ಸಮ್ಮೇಳನದ ಪ್ರಧಾನ ವಿಷಯವಾಗಿದ್ದು, ಮುಂದಿನ ದಶಕದಲ್ಲಿ ಸಹಕಾರಿ ಸಂಸ್ಥೆಗಳು ತಾಂತ್ರಿಕ ನಾವೀನ್ಯತೆಯೊಂದಿಗೆ ಆರ್ಥಿಕ ಸೇರ್ಪಡೆಯನ್ನೂ ಸಂಯೋಜಿಸಬೇಕೆಂದು ಕರೆ ನೀಡಿದರು. ಉತ್ತಮ ಆಡಳಿತ, ಡಿಜಿಟಲ್ ಅಳವಡಿಕೆ, ಎಂಎಸ್‌ಎಂಇ ಕ್ರೆಡಿಟ್ ವಿಸ್ತರಣೆ ಮತ್ತು ಜರ್ಮನಿ, ಜಪಾನ್ ಮತ್ತು ನೆದರ್‌ಲ್ಯಾಂಡ್ಸ್‌ನಂತಹ ದೇಶಗಳಲ್ಲಿ ಸಹಕಾರಿ ಮಾದರಿಗಳಿಂದ ಜಾಗತಿಕ ಕಲಿಕೆಯ ಮೇಲೆ ಕೇಂದ್ರೀಕರಿಸಿದ ಭವಿಷ್ಯದ ದೃಷ್ಟಿಕೋನದ ಬಗ್ಗೆಯೂ ಅವರು ಗಮನ

.3 ನೇ ಪುಟದಿಂದ




ಸೆಳೆದರು.

ಸಂಘಟಿತ ಸಾಂಸ್ಥಿಕ ಪ್ರಯತ್ನಗಳ ಮೂಲಕ ಯೆಸ್ ಬ್ಯಾಂಕಿನ ಪುನರುಜ್ಜೀವನದ ಉದಾಹರಣೆಯನ್ನು ಉಲ್ಲೇಖಿಸಿದ ಎಚ್.ಕೆ. ಪಾಟೀಲ ಅವರು, ವ್ಯವಸ್ಥಿತ ಸ್ಥಿರತೆ ಅಪಾಯದಲ್ಲಿರುವಾಗ, ಸಂಸ್ಥೆಗಳು ಸ್ಪರ್ಧೆಯನ್ನು ಮೀರಿ ಮೇಲೇರುತ್ತವೆ. ಒತ್ತಡಕ್ಕೊಳಗಾದ ಅರ್ಬನ್ ಸಹಕಾರಿ ಬ್ಯಾಂಕುಗಳನ್ನು ರಕ್ಷಿಸಲು ಇದೇ ರೀತಿಯ ಸಹಯೋಗದ ಅಗತ್ಯವಿದೆ ಎಂದು ಅಭಿಪ್ರಾಯ ಮಂಡಿಸಿದರು. ಸಹಕಾರಿ ಬ್ಯಾಂಕುಗಳು ದುರ್ಬಲ ವರ್ಗಗಳಿಗೆ ನೀಡುವ ಸಾಮಾಜಿಕ ಮತ್ತು ಆರ್ಥಿಕ ಮೌಲ್ಯವು ತೆರಿಗೆಯಿಂದ ಬರುವ ಸೀಮಿತ ಆದಾಯಕ್ಕಿಂತ ಹೆಚ್ಚಿನದ್ದಾಗಿದೆ ಎಂದು ಗಮನ ಸೆಳೆದ ಅವರು, ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80(ಪಿ)(4) ಅನ್ನು ಪರಿಶೀಲಿಸುವಂತೆಯೂ ಮನವಿ ಮಾಡಿದರು.

ಪ್ಯಾಕ್ಸ್‌ಗಳ ಆಧುನೀಕರಣ ಮತ್ತು ಹೊಸ ರಾಷ್ಟ್ರೀಯ ಮಟ್ಟದ ಸಹಕಾರಿ ಸಂಸ್ಥೆಗಳು ಸೇರಿದಂತೆ ಸಹಕಾರಿ ಪರಿಸರ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಕೇಂದ್ರ ಸಹಕಾರ ಸಚಿವಾಲಯವು ತೆಗೆದುಕೊಂಡಿರುವ ಕ್ರಮಗಳನ್ನು ಶ್ಲಾಘಿಸಿದ ಎಚ್. ಕೆ. ಪಾಟೀಲರು, ಎನ್‌ಎಎಫ್‌ಸಿಯುಬಿಯ ಮಾರ್ಗದರ್ಶನದಲ್ಲಿ ಎನ್‌ಯುಸಿಎಫ್‌ಡಿಸಿ ತಂತ್ರಜ್ಞಾನ, ನಿಧಿ ಬೆಂಬಲ ಮತ್ತು ಸಲಹಾ ಸೇವೆಗಳ ಮೂಲಕ ವಾರ್ಷಿಕವಾಗಿ ಕನಿಷ್ಠ 10%ರಷ್ಟು ಸುಸ್ಥಿರ ಬೆಳವಣಿಗೆಯನ್ನು ನೀಡುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


ಅಮಿತ್ ಷಾ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಸಹಕಾರಿ ಚಳವಳಿಯು ನಂಬಿಕೆ, ಪಾರದರ್ಶಕತೆ ಮತ್ತು ಪರಿವರ್ತನೆಯ ಹೊಸ ಯುಗವನ್ನು ಪ್ರವೇಶಿಸುತ್ತಿದೆ. ಅಲ್ಲಿ ಸಹಕಾರಿ ಮಾದರಿಯು ಕೇವಲ ಆರ್ಥಿಕ ವ್ಯವಸ್ಥೆಯಾಗಿ ಮಾತ್ರವಲ್ಲದೆ, ಸಮಗ್ರ ಬೆಳವಣಿಗೆಗಾಗಿ ಜನರ ಚಳುವಳಿಯಾಗಿ ನಿಲ್ಲುತ್ತಿದೆ ಎಂದು ಎಚ್. ಕೆ. ಪಾಟೀಲ ಶ್ಲಾಘಿಸಿದರು.

ಈ ಸಮಾರಂಭದಲ್ಲಿ ನ್ಯಾಫಕಬ್‌ನ ಅಧ್ಯಕ್ಷರಾದ ಲಕ್ಷ್ಮೀದಾಸ್, ಉಪಾಧ್ಯಕ್ಷರುಗಳಾದ ಶ್ರೀ ಮುದಿತ್ ವರ್ಮಾ, ಸಿಎ ಮಿಲಿಂದ ಕಾಳೆ, ನಿರ್ದೇಶಕರುಗಳಾದ ಶ್ರೀ ಜ್ಯೋತೀಂದ್ರ ಎಂ. ಮೆಹ್ತಾ, ಶ್ರೀ ರಾಮ ಬಾಬು ಶಾಂಡಿಲ್ಯ, ಶ್ರೀ ಕೆ.ಜಯವರ್ಮಾ, ಶ್ರೀ ವೇಮಿರೆಡ್ಡಿ ನರಸಿಂಹ ರೆಡ್ಡಿ, ಸಿಎ ಅಜಯ ಬ್ರಹ್ಮೇಚ್, ಶ್ರೀ ಒ.ಪಿ. ಶರ್ಮಾ, ಶ್ರೀ ಎ.ಎಂ.ಹಿಂಡಸಗೇರಿ, ಶ್ರೀ ಗೌತಮಬಾಯಿ ಉಮಿಯಾ ಶಂಕರ್ ವ್ಯಾಸ್, ಶ್ರೀ ಕೆ.ಕಾಳಪ್ಪ, ಶ್ರೀಮತಿ ಅಲಕಾ ಶ್ರೀವಾಸ್ತವ, ಶ್ರೀ ಛಲಸನಿ ರಾಘವೇಂದ್ರ ರಾವ್, ಶ್ರೀ ಜ್ಞಾನಚಂದ ಲಕ್ಷ್ಮಣದಾಸ ಜಿ ಗಾರ್ಗ, ಶ್ರೀ ಕಂಜೀಬಾಯಿ ರಾಘವಬಾಯಿ ಬಲಾಲ್, ಶ್ರೀ ಕಾಂತಿಬಾಯಿ ಎಲ್. ಪಟೇಲ್, ಡಾ॥ ಉದಯ ವಿ.ಜೋಶಿ, ಶ್ರೀ ದಿಲೀಪ್ ಸಂಘಾನಿ, ಶ್ರೀ ಎನ್.ಎಸ್.ಜಯಕುಮಾರ್, ಶ್ರೀ ಮದನ ಗೋಪಾಲ ಸ್ವಾಮಿ, ಶ್ರೀ ಸುನಿಲ ಒ.ಪಿ.ದಿಯೋರಾ, ಶ್ರೀ ಮೋಹನ ಪರಶರ, ಶ್ರೀ ನರಣದಾಸ್ ವಿ.ಪಟೇಲ, ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಯೋಗೇಶ್ ಶರ್ಮಾ ಉಪಸ್ಥಿತರಿದ್ದರು. ದೇಶದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಮತ್ತಿತರರು ಉಪಸ್ಥಿತರಿದ್ದರು.



# ಸಹಕಾರ ಸಪ್ತಾಹ-2025 ಆಹ್ವಾನ ಪತ್ರಿಕೆ









# ಸಹಕಾರ ಸಪ್ತಾಹ-2025 ಆಹ್ವಾನ ಪತ್ರಿಕೆ

72ನೇ

## ಅಖಿಲ ಭಾರತ ಸಹಕಾರ ಸಪ್ತಾಹ – 2025

**ಶ್ರೀ ಶಿವಾನಂದ ಸಂಗಾಪುರ**
ಸನ್ಮಾನ್ಯ ಅಧ್ಯಕ್ಷರು,
ಹಾವೇರಿ ಜಿಲ್ಲಾ ಸಹಕಾರ ಯೂನಿಯನ್ ನಿ.,
ಹಾವೇರಿ

**ಶ್ರೀ ಸುರೇಶಚಂದ್ರ ಹೆಗಡೆ**
ಸನ್ಮಾನ್ಯ ಉಪಾಧ್ಯಕ್ಷರು, ಧಾರವಾಡ, ಗದಗ
ಹಾಗೂ ಉತ್ತರ ಕನ್ನಡ ಜಿಲ್ಲಾ ಹಾಲು ಉತ್ಪಾದಕರ
ಸಹಕಾರ ಸಂಘಗಳ ಒಕ್ಕೂಟ ನಿ., ಧಾರವಾಡ

**ಶ್ರೀ ಬಸವರಾಜ ಅರಬಗೊಂಡ**
ಸನ್ಮಾನ್ಯ ನಿರ್ದೇಶಕರು,
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,
ಬೆಂಗಳೂರು

**ಶ್ರೀ ವಿಜಯಾನಂದ ಬಿ. ಹೊಸಕೋಟಿ**
ವಿಶೇಷ ಆಹ್ವಾನಿತರು,
ಕ.ರಾ.ಸ.ಪ.ಬ್ಯಾ.ಮಂ.ನಿ., ಬೆಂಗಳೂರು.

**ಶ್ರೀ ರಾಘವ ವಿಷ್ಣು ಬಾಳೇರಿ**
ನಿರ್ದೇಶಕರು,
ಕ.ರಾ.ಸ.ಪ.ಬ್ಯಾ.ಮಂ.ನಿ., ಬೆಂಗಳೂರು

**ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ**
ಶಿಕ್ಷಣನಿಧಿ ಸಲಹಾ ಸಮಿತಿ ಸದಸ್ಯರು,
ಕ.ರಾ.ಸ.ಪ.ಬ್ಯಾ.ಮಂ.ನಿ.,
ಬೆಂಗಳೂರು

**ಶ್ರೀ ಬಾಪೂಗೌಡ ಡಿ. ಪಾಟೀಲ**
ಸನ್ಮಾನ್ಯ ವೃತ್ತಿಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,
ಬೆಂಗಳೂರು

**ಶ್ರೀ ಡಿಳ್ಳೆಪ್ಪ ಅಣ್ಣೇರ**
ಸನ್ಮಾನ್ಯ ನಿರ್ದೇಶಕರು,
ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗ
ನೇಕಾರರ ಮಹಾಮಂಡಳ ನಿ., ಬೆಂಗಳೂರು

**ಶ್ರೀಮತಿ ರತ್ನಾ ಶೆಟ್ಟರ್**
ಸನ್ಮಾನ್ಯ ನಿರ್ದೇಶಕರು,
ಕರ್ನಾಟಕ ರಾಜ್ಯ ಸಹಕಾರ ಮಹಿಳಾ
ಮಹಾಮಂಡಳ ನಿ., ಬೆಂಗಳೂರು

**ಶ್ರೀ ಕೆ. ಶಿವಲಿಂಗಪ್ಪ**
ಸನ್ಮಾನ್ಯ ನಿರ್ದೇಶಕರು,
ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರ
ಮಹಾಮಂಡಳ ನಿ., ಬೆಂಗಳೂರು

### ವಿಶೇಷ ಆಹ್ವಾನಿತರು :

**ಶ್ರೀ ಸಂಜಯ ಶೆಟ್ಟೆಣ್ಣನವರ,** ಭಾ.ಆ.ಸೇ
ಸನ್ಮಾನ್ಯ ಕಾರ್ಯದರ್ಶಿಗಳು, ಸಹಕಾರ ಇಲಾಖೆ,
ಕರ್ನಾಟಕ ಸರ್ಕಾರ, ಬೆಂಗಳೂರು

**ಶ್ರೀ ಟಿ.ಎಚ್.ಎಂ. ಕುಮಾರ,** ಭಾ.ಆ.ಸೇ
ಸನ್ಮಾನ್ಯ ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು

**ಡಾ॥ ವಿಶಾಲ ಆರ್.** ಭಾ.ಆ.ಸೇ
ಸನ್ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ (ವಿತ್ತಿಯ ಸುಧಾರಣೆ)
ಬೆಂಗಳೂರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಗಳು

**ಡಾ॥ ವಿಜಯಮಹಾಂತೇಶ ದಾನಮ್ಮನವರ,** ಭಾ.ಆ.ಸೇ.,
ಸನ್ಮಾನ್ಯ ಜಿಲ್ಲಾಧಿಕಾರಿಗಳು,
ಹಾವೇರಿ ಜಿಲ್ಲೆ, ಹಾವೇರಿ

**ಶ್ರೀಮತಿ ರುಚಿ ಬಿಂದಾಲ್,** ಭಾ.ಆ.ಸೇ
ಸನ್ಮಾನ್ಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ್, ಹಾವೇರಿ

**ಶ್ರೀಮತಿ ಯಶೋಧಾ ವಂಟಗೋಡಿ,** ಭಾ.ಪೊ.ಸೇ.,
ಸನ್ಮಾನ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು,
ಹಾವೇರಿ ಜಿಲ್ಲೆ, ಹಾವೇರಿ

**ಶ್ರೀ ಎಂ.ಡಿ. ಮಲ್ಲೂರು,** ಕೆ.ಸಿ.ಎಸ್
ಸನ್ಮಾನ್ಯ ನಿರ್ದೇಶಕರು,
ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು

72ನೇ

## ಅಖಿಲ ಭಾರತ ಸಹಕಾರ ಸಪ್ತಾಹ – 2025

### ಸರ್ವರಿಗೂ ಆದರದ ಸ್ವಾಗತ

**ಶ್ರೀ ಕೆ. ಎಸ್. ನವೀನ**
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ
ಸಹಕಾರ ಮಹಾಮಂಡಳ ನಿ., ಬೆಂಗಳೂರು

**ಶ್ರೀ ಅಶ್ವತನಾರಾಯಣ,** ಕೆ.ಸಿ.ಎಸ್
ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಹಕಾರ
ಮಹಾಮಂಡಳ ನಿ., ಬೆಂಗಳೂರು

**ಶ್ರೀ ಕಲ್ಲಪ್ಪ ಓಬಣ್ಣಗೋಳ,** ಕೆ.ಸಿ.ಎಸ್
ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು,
ಬೆಳಗಾವಿ ಪ್ರಾಂತ, ಬೆಳಗಾವಿ.

**ಶ್ರೀಮತಿ ಕೆ.ಎಂ. ಆಶಾ,**
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ
ಮಹಾಮಂಡಳ ನಿ., ಬೆಂಗಳೂರು

**ಶ್ರೀಮತಿ ಸುನೀತಾ ಸಿದ್ರಾಮ್,** ಕೆ.ಸಿ.ಎಸ್
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
ದಿ ಕೆ.ಸಿ.ಸಿ ಬ್ಯಾಂಕ ಅ, ಧಾರವಾಡ

**ಶ್ರೀ ಅಜ್ಮತ್ ಉಲ್ಲಾಖಾನ,** ಕೆ.ಸಿ.ಎಸ್
ಸಹಕಾರ ಸಂಘಗಳ ಉಪನಿಬಂಧಕರು,
ಹಾವೇರಿ ಜಿಲ್ಲೆ, ಹಾವೇರಿ

**ಶ್ರೀಮತಿ ವಿದ್ಯಾ ಹೊನ್ನಶೆಟ್ಟಿ** ಕೆ.ಸಿ.ಎಸ್
ಉಪ ನಿರ್ದೇಶಕರು, ಸಹಕಾರ ಸಂಘಗಳ
ಲೆಕ್ಕಪರಿಶೋಧನಾ ಇಲಾಖೆ, ಹಾವೇರಿ ಜಿಲ್ಲೆ, ಹಾವೇರಿ

**ಶ್ರೀ ಪುಂಡಲೀಕ ಎನ್. ಕೇರೂರೆ**
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು

**ಶ್ರೀ ವಿಕ್ರಮ್ ಕುಲಕರ್ಣಿ,**
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಹಾವೇರಿ ಉಪವಿಭಾಗ, ಹಾವೇರಿ

**ಶ್ರೀ ಎಸ್.ಜಿ. ಸುಣಗಾರ,**
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಸವಣೂರು ಉಪವಿಭಾಗ, ಸವಣೂರು

**ಶ್ರೀ ಪ್ರದೀಪ ಎಸ್.ಎಂ.,**
ವ್ಯವಸ್ಥಾಪಕ ನಿರ್ದೇಶಕರು, ಹಾವೇರಿ ಜಿಲ್ಲಾ ಸಹಕಾರ
ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಹಾವೇರಿ

**ಶ್ರೀ ಪ್ರಜ್ವಲ್ ಕೆ.ಎನ್.,**
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಕರ್ನಾಟಕ
ರಾಜ್ಯ ಪತ್ತಿನ ಸಹಕಾರ ಮಹಾಮಂಡಳ ನಿ.,
ಬೆಂಗಳೂರು

**ಶ್ರೀಮತಿ ಸುಧಾ,**
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
ಕರ್ನಾಟಕ ರಾಜ್ಯ ಸಹಕಾರ ಮಹಿಳಾ
ಮಹಾಮಂಡಳ ನಿ., ಬೆಂಗಳೂರು

**ಶ್ರೀ ಬಿ. ಶಿವಶಂಕರ,**
ಕಾರ್ಯದರ್ಶಿ, ಕರ್ನಾಟಕ ರಾಜ್ಯ ಉಣ್ಣೆ ಕೈಮಗ್ಗ
ನೇಕಾರರ ಸಹಕಾರ ಮಹಾಮಂಡಳ ನಿ.,
ಬೆಂಗಳೂರು

**ಶ್ರೀ ಡಿ.ಆರ್. ವೆಂಕಟರಾಮ್**
ನೋಡಲ್ ಅಧಿಕಾರಿ,
ಪ್ರಾಂಶುಪಾಲರು. ಕೆ.ಐ.ಸಿ.ಎಂ. ಧಾರವಾಡ

**ಶ್ರೀಮತಿ ಸವಿತಾ ಕುರ್ಲಗೇರಿ ಹಿರೇಮಠ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಹಾವೇರಿ
ಜಿಲ್ಲಾ ಸಹಕಾರ ಯೂನಿಯನ್ ನಿ., ಹಾವೇರಿ

ಹಾಗೂ

**ಹಾವೇರಿ, ಧಾರವಾಡ, ಗದಗ ಜಿಲ್ಲೆಯ ಎಲ್ಲ ಸಹಕಾರ ಸಂಘ /ಸಹಕಾರ ಬ್ಯಾಂಕು /ಸೌಹಾರ್ದ ಸಹಕಾರ ಸಂಘಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ**

72ನೇ

## ಅಖಿಲ ಭಾರತ ಸಹಕಾರ ಸಪ್ತಾಹ – 2025

### ಆದರದ ಸ್ವಾಗತ ಕೋರುವವರು

**ಹಾವೇರಿ ಜಿಲ್ಲಾ ಸಹಕಾರ ಯೂನಿಯನ್ ನಿ., ಹಾವೇರಿ**

ಅಧ್ಯಕ್ಷರು, ಶ್ರೀ ಶಿವಾನಂದ ಹ. ಸಂಗಾಪುರ,
ಉಪಾಧ್ಯಕ್ಷರು, ಶ್ರೀ ನಿಶೀಮಗೌಡ ಶಂ. ಪಾಟೀಲ ಹಾಗೂ ಆಡಳಿತ ಮಂಡಳಿ ಸದಸ್ಯರಾದ
ಶ್ರೀ ಬಸವರಾಜ ನೀ. ಅರಬಗೊಂಡ, ಶ್ರೀ ಶಿವಾನಂದ ಗು. ರಾಮಗೇರಿ, ಶ್ರೀ ಧರಿಯಪ್ಪಗೌಡ ಹ. ಪಾಟೀಲ,
ಶ್ರೀ ಬಸವೇಶಗೌಡ ರ. ಪಾಟೀಲ್, ಶ್ರೀ ಮಲ್ಲಿಕಾರ್ಜುನ್ ಜಿ. ಸಾತೇನಹಳ್ಳಿ, ಶ್ರೀ ಏಕೇಶಪ್ಪ ಶಿ. ಬಣಕಾರ,
ಶ್ರೀ ವೀರಭದ್ರಪ್ಪ. ವೀ. ಉಪ್ಪಿನ, ಶ್ರೀ ಬಸನಗೌಡ ಮೋ. ಪಾಟೀಲ್. ಶ್ರೀಮತಿ ನೀಲವ್ವ ಭೀ. ಮುದಿಗೌಡ್ರ,
ಶ್ರೀ ಲಿಂಗನಗೌಡ ಕ. ಹಳ್ಳಪ್ಪಗೌಡ್ರ,. ಶ್ರೀ ಚಂದ್ರಶೇಖರ ನಾ. ಛತ್ರದ ಮತ್ತು ವೃತ್ತಿಪರ ನಿರ್ದೇಶಕರು
ಶ್ರೀ ಮೃತ್ಯುಂಜಯ ಚ. ಯಲಿಗಾರ ಹಾಗೂ ಶ್ರೀ ನಾಗೇಂದ್ರ ಪ್ರ. ಕಟಕೋಳ ಹಾಗೂ ಸಿಬ್ಬಂದಿ ವರ್ಗದವರು.

**ಕರ್ನಾಟಕ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ ನಿ., ಧಾರವಾಡ**

ಬ್ಯಾಂಕಿನ ಅಧ್ಯಕ್ಷರು, ಶ್ರೀ ಶಿವಕುಮಾರಗೌಡ ಶಿ. ಪಾಟೀಲ,
ಉಪಾಧ್ಯಕ್ಷರು, ಶ್ರೀ ನಿಂಗನಗೌಡ ಮುದಿಗೌಡ ಮರಿಗೌಡ್ರ.
ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳಾದ ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ,
ಶ್ರೀ ಮಂಜುನಾಥಗೌಡ ಎಸ್. ಮುರಳ್ಳಿ, ಶ್ರೀ ಯಲ್ಲಪ್ಪ ರಾಮಪ್ಪ ಹೆಬಸೂರ,
ಶ್ರೀ ಗದಿಗೆಪ್ಪಗೌಡ ಪರ್ವತಗೌಡ ಪಾಟೀಲ, ಶ್ರೀ ಮಲ್ಲಪ್ಪ ಫ. ಕೆಲಗುಡಿ, ಶ್ರೀ ಎಲ್.ಎಸ್. ಚಪ್ಪರದಹಳ್ಳಿ,
ಶ್ರೀ ಚಂದ್ರಶೇಖರಗೌಡ ಮುದಕನಗೌಡ ಪಾಟೀಲ, ಶ್ರೀ ಸಿದ್ದಪ್ಪ ಬಸಪ್ಪ ಸಪ್ಪೂರಿ,
ಶ್ರೀ ನಾಗಪ್ಪ ಬಸವಣ್ಣೆಪ್ಪ ಸುಂಕದ, ಶ್ರೀ ಗೊವಿಂದಗೌಡ ವೆಂ. ಪಾಟೀಲ,
ಶ್ರೀ ಮಹಾಬಳೇಶ್ವರಗೌಡ ಎಸ್. ಪಾಟೀಲ, ಶ್ರೀ ಕೊಟ್ರೇಶಪ್ಪ ರುದ್ರಪ್ಪ ಬಸೆಗಣ್ಣೆ,
ಶ್ರೀ ಚನ್ನಬಸಪ್ಪ ಮಲಕಪ್ಪ ಹುಲ್ಲತ್ತಿ, ಶ್ರೀ ಮಳ್ಳಪ್ಪ ಗುರಪ್ಪ ನಿಂಗಜ್ಜನವರ,
ಶ್ರೀ ಸುಭಾಸ ಮುದಕಪ್ಪ ಗಡೆಪ್ಪನವರ, ಶ್ರೀ ಸಂಗಮೇಶ್ವರ ರಾಜಶೇಖರಸ್ವಾಮಿ ಕಂಬಾಳಿಮಠ,
ಶ್ರೀ ಸದಾನಂದ ಅಶೋಕ ಮಳ್ಳಿಹಳ್ಳಿ, ಶ್ರೀ ತಿರುಪತಿ ಶಿ. ಅಜ್ಜನವರ, ಶ್ರೀ ರವಿಶಂಕರ ಎಂ. ಬಾಳಿಕಾಯಿ,
ಶ್ರೀ ಚನ್ನಬಸನಗೌಡ ಬಸನಗೌಡ ದೊಡ್ಡಗೌಡ್ರ ಹಾಗೂ ಸಿಬ್ಬಂದಿ ವರ್ಗದವರು.

**ಹಾವೇರಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಹಾವೇರಿ**

ಅಧ್ಯಕ್ಷರು, ಶ್ರೀ ಮಂಜನಗೌಡ ಹನಮಂತಗೌಡ ಪಾಟೀಲ,
ಉಪಾಧ್ಯಕ್ಷರು ಶ್ರೀ ಉಜ್ಜನಗೌಡ ಹೂವನಗೌಡ ಮಾವಿನತೋಪ, ಆಡಳಿತ ಮಂಡಳಿ ಸದಸ್ಯರಾದ
ಶ್ರೀ ಅಶೋಕ ಕರೆಗೌಡ್ರ ಪಾಟೀಲ, ಶ್ರೀ ಚಂದ್ರಪ್ಪ ಲಕ್ಷ್ಮಣಪ್ಪ ಜಾಲಗಾರ, ಶ್ರೀ ಶಶಿಧರ ಚನ್ನಬಸಪ್ಪ ಯಲಿಗಾರ,
ಶ್ರೀ ತಿಪ್ಪಣ್ಣ ಮಲ್ಲಿಕಾರ್ಜುನಪ್ಪ ಸಾತಣ್ಣವರ, ಶ್ರೀ ಪ್ರಕಾಶ ಸಹದೇವಪ್ಪ ಬನ್ನಿಹಟ್ಟಿ, ಶ್ರೀ ಬಸವೇಶಗೌಡ್ರ
ರವೀಂದ್ರಗೌಡ ಪಾಟೀಲ, ಶ್ರೀ ಶಂಕರಗೌಡ ಬಾಪೂಜಿಗೌಡ ಪಾಟೀಲ ಹಾಗೂ ಸಿಬ್ಬಂದಿ ವರ್ಗದವರು.

### ಉಪನ್ಯಾಸ :

**ಶ್ರೀ ಎಚ್.ವಾಯ್, ಗದ್ದನಕೇರಿ** ಕೆ.ಸಿ.ಎಸ್.
ಸಹಕಾರ ಸಂಘಗಳ ಅಪರ ನಿಬಂಧಕರು (ನಿಯಮ 441), ದಾವಾ ಪಂಚಾಯತ ನ್ಯಾಯಾಲಯ, ಹುಬ್ಬಳ್ಳಿ,
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ
ಬೆಳಗ್ಗೆ 10:00 ಗಂಟೆಗೆ ಇವರಿಂದ

72ನೇ

## ಅಖಿಲ ಭಾರತ ಸಹಕಾರ ಸಪ್ತಾಹ – 2025

### ಬೆಳಗ್ಗೆ :

ಸುಗಮ ಸಂಗೀತ
ಉಪನ್ಯಾಸ
ಸಹಕಾರ ಧ್ವಜಾರೋಹಣ
ಪ್ರದರ್ಶನ ಮಳಿಗೆ ಉದ್ಘಾಟನೆ
ಸಹಕಾರಿ ಪಿತಾಮಹ ಭಾವ ಚಿತ್ರಕ್ಕೆ ಪುಷ್ಪಾರ್ಚನೆ
ವಾರಪತ್ರಿಕೆ ಅನಾವರಣ

### ಸಭಾ ಕಾರ್ಯಕ್ರಮ :

ಪ್ರಾರ್ಥನೆ
ಸ್ವಾಗತ ಹಾಗೂ ಮಾಲಾರ್ಪಣೆ
ಪ್ರಾಸ್ತಾವಿಕ ನುಡಿ
ಸಂದೇಶ ವಾಚನ
ಉದ್ಘಾಟನೆ
ಮುಖ್ಯಅತಿಥಿಗಳ ಭಾಷಣ
ಗಣ್ಯರಿಗೆ ಸನ್ಮಾನ
ಸಹಕಾರಿಗಳಿಗೆ ಹಾಗೂ ಸಹಕಾರಿ ಸಂಸ್ಥೆಗಳಿಗೆ ಸನ್ಮಾನ
ಅಧ್ಯಕ್ಷಿಯ ನುಡಿ
ವಂದನಾರ್ಪಣೆ

### ಸೂಚನೆ

ಕಾರ್ಯಕ್ರಮದಲ್ಲಿ ಆಮಂತ್ರಿತ ಸಹಕಾರಿ ಸಂಸ್ಥೆಗಳ ಹಾಗೂ ಸನ್ಮಾನಿಸಲಾಗುವ ಸಹಕಾರ ಸಂಸ್ಥೆಗಳ ಅಧ್ಯಕ್ಷರು ಮತ್ತು ಕಾರ್ಯನಿರ್ವಹಣಾಧಿಕಾರಿಗಳು ಒಟ್ಟಾರೆ ಒಂದು ಸಂಘದಿಂದ 2 ಪ್ರತಿನಿಧಿಗಳು ಬೆಳಗ್ಗೆ 9.30 ಗಂಟೆಗೆ ಕಾರ್ಯಕ್ರಮದ ವೇದಿಕೆಯ ಮುಂಭಾಗದಲ್ಲಿ ಉಪಸ್ಥಿತರಿರಲು ಕೋರಿದೆ.

